ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ7(9) ಪ್ರಾ.ಶಿ.ಅ/ಆ.ಮಾ.ಪ 03/2015-16. ದಿನಾಂಕ: 7-12-2015

ನಮೂನೆ-4

(ನಿಯಮ 7 ರ ಉಪನಿಯಮ 3ರಂತೆ)

ಪರಿಷ್ಕರಿಸಲ್ಪಟ್ಟ ನೋಂದಣಿ ಪ್ರಮಾಣ ಪತ್ರ.

ಕ್ರಮ ಸಂಖ್ಯೆ: 494/2015-16

**ಶ್ರೀ ವೀರಭದ್ರೇಶ್ವರ ವಿದ್ಯಾ ಸಂಸ್ಥೆ (ರಿ), ಬೀರೂರು, ಕಡೂರು ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ** (ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸವನ್ನು ನಮೂದಿಸುವುದು) ಈ ಸಂಸ್ಥೆಯು ಕೆಳಗಿನ ಶಾಲೆಯನ್ನು ನಡೆಸಲು ನೋಂದಾಯಿಸಲ್ಪಟ್ಟಿದೆ.

| ಕ್ರಮ. ಸಂ | ಶಾಲೆಯ ಹೆಸರು ಮತ್ತು ವಿಳಾಸ (ಸಂಸ್ಥೆಯ ವರ್ಗ) | ಅನುಮತಿ ನೀಡಿದ ತರಗತಿ | ಪ್ರಾರಂಭಿಸ ಬೇಕಾದ ವರ್ಷ | ಅನುಮತಿ ನೀಡಿದ ಮಾಧ್ಯಮ | ಪಾವತಿಸಿರುವ ಶುಲ್ಕ |
|---|---|---|---|---|---|
| 01 | ಶ್ರೀ ಶಾರದಾ ವಿದ್ಯಾ ಕಿರಿಯ ಪ್ರಾಥಮಿಕ ಶಾಲೆ, ಬಿ.ಹೆಚ್. ರಸ್ತೆ, ಬೀರೂರು, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. | 1 ರಿಂದ 5ನೇ ತರಗತಿ (ಅನುದಾನ ರಹಿತ) | 2012-13 | ಕನ್ನಡ | ರೂ 5000-00 |

ಮೇಲಿನ ಆಡಳಿತ ಮಂಡಳಿಯು, ಕರ್ನಾಟಕ ಶಿಕ್ಷಣ ಕಾಯಿದೆ 1983ರ (1995ರ ಕರ್ನಾಟಕ ಕಾಯಿದೆ-1) ಸೆಕ್ಷನ್- 31ರ ಉಪ ನಿಯಮ (5) ರಲ್ಲಿನ ಅವಕಾಶಗಳಂತೆ, ಈ ಮೊದಲು ನೋಂದಣಿ ಮಾಡಿದ ಶಾಲೆಯ ವಿವರಗಳಲ್ಲಿ ಬದಲಾವಣೆಗಳಾಗಿರುವುದನ್ನು ವರದಿ ಮಾಡಿ, ಮೂಲ ನೋಂದಣಿ ಪ್ರಮಾಣ ಪತ್ರವನ್ನು ಪರಿಷ್ಕರಿಸುವಂತೆ ಕೋರಿ ನಮೂನೆ-3ರಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತದೆ.

ಪ್ರಯುಕ್ತ, ಈ ಮೊದಲು **ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ** ಪ್ರಾಧಿಕಾರದಿಂದ (ಮೂಲ ನೋಂದಣಿ ಪ್ರಮಾಣ ಪತ್ರ ವಿತರಿಸಿದ ಪ್ರಾಧಿಕಾರದ ಹೆಸರು ಹಾಗೂ ವಿಳಾಸ ಸಹಿತ ವಿವರಗಳನ್ನು ನಮೂದಿಸತಕ್ಕದ್ದು) ವಿತರಿಸಲಾಗಿದ್ದ **07/2011-12 ಕ್ರಮ ಸಂಖ್ಯೆಯ ಹಾಗೂ 16-6-2012 ರ ದಿನಾಂಕದ** ನೋಂದಣಿ ಪ್ರಮಾಣ ಪತ್ರವನ್ನು ಹಿಂಪಡೆದಿದೆ ಮತ್ತು ರದ್ದುಪಡಿಸಿದೆ ಹಾಗೂ ಸಂಬಂಧಿತ ವಹಿಯಲ್ಲಿ ಅಗತ್ಯ ನಮೂದುಗಳನ್ನು ಮಾಡುವಂತೆ ಆ ಮೂಲ ನೋಂದಣಿ ಪ್ರಾಧಿಕಾರಿಗೆ ಸೂಚಿಸಿದೆ.

ಹಾಗೂ, ಇದೀಗ ಪರಿಷ್ಕೃತ ನೋಂದಣಿ ಪ್ರಮಾಣ ಪತ್ರವನ್ನು **ಶ್ರೀ ವೀರಭದ್ರೇಶ್ವರ ವಿದ್ಯಾ ಸಂಸ್ಥೆ (ರಿ), ಬೀರೂರು, ಕಡೂರು ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ** ಇವರ ಹೆಸರಿಗೆ (ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸವನ್ನು ನಮೂದಿಸುವುದು) ಕೆಳಕಂಡಂತೆ ಪರಿಷ್ಕೃತ ವಿವರಗಳನ್ನು ನಮೂದಿಸಿ ವಿತರಿಸಲಾಗಿದೆ.

| ಕ್ರಮ. ಸಂ | ಶಾಲೆಯ ಹೆಸರು ಮತ್ತು ವಿಳಾಸ ಮತ್ತು ವರ್ಗ | ಬೋಧನ ಮಾಧ್ಯಮ | ಅನುಮತಿ ನೀಡಿದ ತರಗತಿಗಳು | ಶೈಕ್ಷಣಿಕ ಸಾಲು | ಶುಲ್ಕದ ವಿವರ |
|---|---|---|---|---|---|
| 01 | ಶ್ರೀ ಶಾರದಾ ವಿದ್ಯಾ ಕಿರಿಯ ಪ್ರಾಥಮಿಕ ಶಾಲೆ, ಬಿ.ಹೆಚ್. ರಸ್ತೆ, ಬೀರೂರು, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. | ಆಂಗ್ಲ | 1-5ನೇ ತರಗತಿ (ಅನುದಾನ ರಹಿತ) | 2015-16 | ---- |

ಈ ಹಿಂದಿನ ಪ್ಯಾರಾಗಳಲ್ಲಿ ಉಲ್ಲೇಖಿಸಿರುವ ಆಡಳಿತ ಮಂಡಳಿಯ ವಿವರಗಳನ್ನು, ಶಿಕ್ಷಣ ಸಂಸ್ಥೆಗಳ ಪರಿಷ್ಕೃತ ನೋಂದಣಿ ಪ್ರಮಾಣ ಪತ್ರವನ್ನು ವಿತರಿಸಲಾಗಿರುವ ನೋಂದಣಿ ವಹಿಯ 01 **ವಾಲ್ಯೂಂನ ಪುಟ ಸಂಖ್ಯೆ:** 61 ರ **ಕ್ರಮ ಸಂಖ್ಯೆ:** 494 ರಲ್ಲಿ ನೋಂದಾಯಿಸಲಾಗಿದೆ.

ಈ ನೋಂದಣಿ ಪ್ರಮಾಣ ಪತ್ರವನ್ನು **ದಿನಾಂಕ:7-12-2015** ರಂದು ವಿತರಿಸಲಾಗಿದೆ.

19/12/15

(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಹಾಗೂ ನೋಂದಣಿ ಪ್ರಾಧಿಕಾರಿ

7/12

ಸ್ಥಳ: ಬೆಂಗಳೂರು
ದಿನಾಂಕ: 7-12-2015

ಗೆ,

1. ಉಪ ನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೀರೂರು ವಲಯ ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
3. ಅಧ್ಯಕ್ಷರು/ಕಾರ್ಯದರ್ಶಿಗಳು, ಶ್ರೀ ವೀರಭದ್ರೇಶ್ವರ ವಿದ್ಯಾ ಸಂಸ್ಥೆ (ರಿ), ಬೀರೂರು, ಕಡೂರು ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ
4. ಕಛೇರಿ ಪ್ರತಿ